# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 564

ಉತ್ತರ ದಿನಾಂಕ : 08.12.2023

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಗ್ರಾಮಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಎಲ್ಲಾ ಗ್ರಾಮಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆಯಿರುತ್ತದೆ. |
| ಆ) | ಶುದ್ಧ ಕುಡಿಯುವ ನೀರನ್ನು ಸಾರ್ವಜನಿಕರಿಗೆ ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಶುದ್ಧ ಕುಡಿಯುವ ನೀರನ್ನು ಸಾರ್ಜಜನಿಕರಿಗೆ ಸರಬರಾಜು ಮಾಡುವ ಉದ್ದೇಶದಿಂದ, ಮೇಲ್ಮೈ ನೀರು ಆಧಾರಿತ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು, ಅಂತರ್ಜಲ ಆಧಾರಿತ ಏಕಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಹಾಗೂ 18,000 ಕ್ಕೂ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅನುಷ್ಠಾನಗೊಳಿಸಿರುವುದಲ್ಲದೇ ಎಲ್ಲಾ ನೀರಿನ ಮೂಲಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 31 ಜಿಲ್ಲಾ ಮಟ್ಟದ ಪ್ರಯೋಗಾಲಯಗಳನ್ನು ಮತ್ತು 48 ತಾಲ್ಲೂಕು ಮಟ್ಟದ ಕುಡಿಯುವ ನೀರಿನ ಪರೀಕ್ಷಾ ಪ್ರಯೋಗಾಲಗಳನ್ನು ಸ್ಥಾಪಿಸಲಾಗಿರುತ್ತದೆ. |
| ಇ) | ರಾಜ್ಯದ ಹಲವು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಸಾರ್ವಜನಿಕರು ಕಲುಷಿತ ನೀರು ಸೇವನೆ ಮಾಡಿ ಪ್ರಾಣಹಾನಿ ಪ್ರಕರಣಗಳು ಪದೇಪದೇ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದನ್ನು ತಡೆಗಟ್ಟುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು; (01-04-2023 ರಿಂದ ಕಲುಷಿತ ನೀರನ್ನು ಸೇವಿಸಿ ಆದಂತಹ ಪ್ರಾಣಹಾನಿ, ಆರೋಗ್ಯ ಸಮಸ್ಯೆ, ಇತ್ಯಾದಿ ಪ್ರಕರಣಗಳ ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | ಬಂದಿದೆ.<br><br>ದಿನಾಂಕ:01.04.2023ರಿಂದ ಕಲುಷಿತ ನೀರನ್ನು ಸೇವಿಸಿ ಆದಂತಹ ಪ್ರಾಣಹಾನಿ, ಆರೋಗ್ಯ ಸಮಸ್ಯೆ, ಇತ್ಯಾದಿ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಈ) | ಗ್ರಾಮಗಳು, ಹೋಬಳಿಗಳು, ತಾಲ್ಲೂಕುಗಳು ಮತ್ತು ಜಿಲ್ಲೆಗಳ ಜನರಿಗೆ ಶುದ್ಧವಾದ ಕುಡಿಯುವ ನೀರನ್ನು ಪೂರೈಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ವಿವರಗಳನ್ನು ನೀಡುವುದು? | ಗ್ರಾಮಗಳು, ಹೋಬಳಿಗಳು, ತಾಲ್ಲೂಕುಗಳು ಮತ್ತು ಜಿಲ್ಲೆಗಳ ಜನರಿಗೆ ಶುದ್ಧವಾದ ಕುಡಿಯುವ ನೀರನ್ನು ಪೂರೈಸಲು ಪ್ರಸ್ತುತ ಇಲಾಖೆಯಿಂದ ಜಲ ಜೀವನ್ ಮಿಷನ್ ಯೋಜನೆಯಡಿ ಶಾಶ್ವತ ಶುದ್ಧ ಕುಡಿಯುವ ನೀರನ್ನು ಪೂರೈಸಲು ಸುಸ್ಥಿರ ಜಲಮೂಲಗಳನ್ನು ಪರಿಗಣಿಸಿ ಒಟ್ಟು 160 ಬಹುಗ್ರಾಮ ಕುಡಿಯುವ ನೀರು |

| | | |
|---|---|---|
| | | ಯೋಜನೆಗಳನ್ನು ರೂಪಿಸಲಾಗಿರುತ್ತದೆ. ಹಾಗೂ ಗ್ರಾಮೀಣ ಜನವಸತಿಗಳ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸಲು ಒಟ್ಟು 42,559 ಏಕಗ್ರಾಮ ಕುಡಿಯುವ ನೀರನ್ನು ಯೋಜನೆಗಳನ್ನು ರೂಪಿಸಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಲಾಗಿದೆ. |

ಸಂ:ಗ್ರಾಕುನೀ&ನೈಇ/61/ಆಡಳಿತ-8/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ ಹಾಗೂ
ಮಾಹಿತಿ ತಂತ್ರಜ್ಞಾನ & ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ-1

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 564 ಕ್ಕೆ ಲಗತ್ತು ಅನುಬಂಧ.

## ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಕಲುಷಿತ ಕುಡಿಯುವ ನೀರು ಸೇವನೆಯಿಂದ ಕಂಡು ಬಂದಿರುವ ಪ್ರಕರಣಗಳ ವಿವರಗಳು

| ದಿನಾಂಕ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಗ್ರಾಮದ ಹೆಸರು | ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದಿರುವ ಸಂಖ್ಯೆ | ಸಾವುನೋವುಗಳು ಸಂಭವಿಸಿರುವ ಸಂಖ್ಯೆ |
|---|---|---|---|---|---|---|
| 01-04-2023 | ಬಳ್ಳಾರಿ | ಬಳ್ಳಾರಿ | ರೂಪನಗುಡಿ | ಕುಂಟನಹಾಳ್ | 17 | 0 |
| 24-05-2023 | ರಾಯಚೂರು | ದೇವದುರ್ಗ | ಜಾಡಲದಿನ್ನಿ | ರೇಕಲಮರಡಿ | 24 | 1 |
| 28-05-2023 | ರಾಯಚೂರು | ಲಿಂಗಸಗೂರು | ಗೊರೆಬಾಳ್ | ಗೊರೆಬಾಳ್ | 15 | 0 |
| 06-06-2023 | ಕೊಪ್ಪಳ | ಕನಕಗಿರಿ | ಬಸರಿಹಾಳ್ | ಬಸರಿಹಾಳ್ | 38 | 2 |
| 02-06-2023 | ಕೊಪ್ಪಳ | ಕುಷ್ಟಗಿ | ಬಿಜಕಲ್ | ಬಿಜಕಲ್ | 15 | 1 |
| 28-06-2023 | ಬಳ್ಳಾರಿ | ಸಂಡೂರ್ | ಸುಶೀಲ್ ನಗರ | ಸಿದ್ಧಾಪುರ | 35 | 0 |
| 01-07-2023 | ವಿಜಯನಗರ | ಕೂಡ್ಲಿಗಿ | ಬಡೇಲಡಗು | ದೊಡ್ಡಗೊಲ್ಲರಹಟ್ಟಿ | 6 | 0 |
| 12-07-2023 | ಚಿತ್ರದುರ್ಗ | ಮೊಳಕಾಲ್ಮೂರು | ನಾಗಸಮುದ್ರ | ನಾಗಸಮುದ್ರ | 33 | 0 |
| 22-07-2023 | ವಿಜಯನಗರ | ಹರಪ್ಪನಹಳ್ಳಿ | ನಂದಿದೇವೂರು | ಕನಗಿವಿಹಳ್ಳಿ | 41 | 0 |
| 28-07-2023 | ಬೀದರ್ | ಬೀದರ್ | ಚಟ್ನಳ್ಳಿ | ಬರೀದಾಬಾದ್ | 14 | 0 |
| 29-07-2023 | ಬೀದರ್ | ಚಿತ್ತಗುಪ್ಪ | ಬೆಳ್ಕೆರ | ಬೆಳ್ಕೆರ | 28 | 0 |
| 08-08-2023 | ರಾಯಚೂರು | ಲಿಂಗಸುಗೂರು | ಚಿತ್ತಾಪುರ | ಚಿತ್ತಾಪುರ | 70 | 0 |
| 23-08-2023 | ಯಾದಗಿರಿ | ಗುರುಮಿಟಕಲ್ | ಗಾಜರಕೋಟ್ | ಗಾಜರ್ ಕೋಟ್ ಮತ್ತು ಶಿವಪುರ | 19 | 0 |
| 24-08-2023 | ಯಾದಗಿರಿ | ಹುಣಸಗಿ | ಮರಬಳ್ಳಿ | ಮರಬಳ್ಳಿ | 8 | 1 |
| | | | | ಒಟ್ಟು | 363 | 5 |

CE
RDW & SD